## ಯಕ್ಷೋತ್ಸವ ಸಮಾರೋಪ: ಸ್ವರ್ಣವಲ್ಲೀ ಸ್ವಾಮೀಜಿ ಅಭಿಪ್ರಾಯ

# ಮಾನಸಿಕ ಬೆಳವಣಿಗೆಗೆ ಸಾತ್ವಿಕ ಚಿಂತನೆ ಅಗತ್ಯ

ಪ್ರಜಾವಾಣಿ ವಾರ್ತೆ

ಶಿರಸಿ: ಶಾರೀರಿಕ ಅಭಿವೃದ್ಧಿಗೆ ಆಹಾರ ಎಷ್ಟು ಅಗತ್ಯವೋ ಮಾನಸಿಕ ಬೆಳವಣಿಗೆಗೆ ಸಾತ್ವಿಕ ಚಿಂತನೆಗಳೂ ಅಷ್ಟೇ ಮುಖ್ಯ ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಸ್ವರ್ಣವಲ್ಲೀ ಮಠದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಯಕ್ಷೋತ್ಸವ ಸಮಾರೋಪದಲ್ಲಿ ಹಿರಿಯ ಸಾಹಿತಿ ಅತ್ತಿಮುರ್ಡು ವಿಶ್ವೇಶ್ವರ ಹೆಗಡೆ ಅವರಿಗೆ ಎಂ. ಎ.ಹೆಗಡೆ ದಂಟ್ಕಲ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಶರೀರ ಬೆಳವಣಿಗೆಗೆ ಆಹಾರ, ವ್ಯಾಯಾಮ, ವಿಶ್ರಾಂತಿ ಇದ್ದಂತೆ ಮಾನಸಿಕ ಬೆಳವಣಿಗೆಗೆ ಒಳ್ಳೆಯ ವಿಷಯಗಳು, ಧ್ಯಾನ, ಪ್ರಾಣಾಯಾಮ ಸಹಕಾರಿ. ಮಾನಸಿಕ ಬೆಳವಣಿಗೆಗೆ ಪೂರಕ ಚಟುವಟಿಕೆಗಳತ್ತ ಮಕ್ಕಳ ಆಸಕ್ತಿ ಹೊರಳಿಸಬೇಕು ಎಂದರು.

ಯಕ್ಷಗಾನ ಕಲಾವಿದ ನಾಗರಾಜ ನಾಯಕ ಮಾತನಾಡಿ, ತಾಳಮದ್ದಲೆ ವೀಕ್ಷಣೆಯಿಂದ ಬುದ್ಧಿ ಚುರುಕಾಗುತ್ತದೆ. ಚಿಂತನೆಯ ಹಂತಕ್ಕೆ ಯಕ್ಷಗಾನ ನಮ್ಮನ್ನು ತಂದು ನಿಲ್ಲಿಸುತ್ತದೆ. ಇಂಥ ಕಲೆಗಳ ಪೋಷಣೆ ಅತ್ಯಗತ್ಯ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಶ್ವೇಶ್ವರ ಹೆಗಡೆ ಅತ್ತಿಮುರುಡು, ತಮ್ಮಲ್ಲಿರುವ ವಿದ್ವತ್ತನ್ನು ಶ್ರೀಮಂತ ಗೊಳಿಸುವ ಕಲೆ ಕೆಲವರಲ್ಲಿ ಮಾತ್ರ ಇರುತ್ತದೆ. ಆ ಕೆಲಸವನ್ನು ದಿವಂಗತ ಎಂ.ಎ.ಹೆಗಡೆ ಮಾಡಿದ್ದಾರೆ ಎಂದು ತಿಳಿಸಿದರು.

ಮಠದ ಪ್ರಮುಖರಾದ ವಿ.ಎನ್. ಹೆಗಡೆ, ಆರ್.ಎಸ್.ಹೆಗಡೆ ಇದ್ದರು.



ಶಿರಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ವಿಶ್ವೇಶ್ವರ ಹೆಗಡೆ ಅತ್ತಿಮುರುಡು ಅವರಿಗೆ ಸ್ವರ್ಣವಲ್ಲೀ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಎಂ.ಎ.ಹೆಗಡೆ ದಂಟ್ಕಲ್ ಪ್ರಶಸ್ತಿ ಪ್ರದಾನ ಮಾಡಿದರು